**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 12

ಚಾ.ಸಾ. 21

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 17.11.2025**

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದರಾಜು.ಎಸ್. |
| ತಂದೆಯ ಹೆಸರು | ಸಿದ್ದಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ಮುಖ್ಯ ಪೇದೆ, ಕೆಸ್ತೂರು ಪೊಲೀಸ್ ಠಾಣೆ |
| ವಾಸ | ಕೆಸ್ತೂರು |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಜುಲೈ 2014 ರಿಂದ ಡಿಸೆಂಬರ್ 2016 ರವರೆಗೆ ಪೊಲೀಸ್ ಪೇದೆಯಾಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 25.12.2016 ರಂದು ಹುಲಿಕೆರೆ ಕಡೆ ಸಾಯಂಕಾಲ 4.00 ರಿಂದ 5.00 ಗಂಟೆಗೆ ಗಸ್ತುವಿನಲ್ಲಿದ್ದಾಗ ತೊಪ್ಪನಹಳ್ಳಿಯಲ್ಲಿ ಗಲಾಟೆಯಾಗುತ್ತಿದ್ದೆ ಎಂದು ರವೀಂದ್ರ ಸಾವರ್ಜನಿಕರು ಚಾಸಾ.19 ಸಂಜೆ 5.30 ಗಂಟೆಗೆ ಫೋನು ಮಾಡಿ ವಿಷಯ ತಿಳಿಸಿದರು. ಪ್ರಸನ್ನ, ಮುತ್ತುರಾಜು ಮತ್ತು ಇನ್ನೊಬ್ಬ ಮುತ್ತುರಾಜುರವರ ಮಧ್ಯೆ ಗಲಾಟೆಯಾಗುತ್ತಿದ್ದೆ ಎಂದು ಹೇಳಿದರು. ತಕ್ಷಣ ನಾನು ತೊಪ್ಪನಹಳ್ಳಿ ಕಡೆಗೆ ಹೋದೆ. ನಾನು ಸಂಜೆ 6.00 ಗಂಟೆ ಸಮಯಕ್ಕೆ ತೊಪ್ಪನಹಳ್ಳಿಯ ಅರಳೀಮರದ

ಕಡೆಗೆ ಹೋದೆ. ನಾನು ಅಲ್ಲಿ ತಲುಪಿದಾಗ, ಮುತ್ತುರಾಜು ಮತ್ತು ನಂದೀಶ ಎಂಬುವವರಿಗೆ ಏಟು ಆಗಿ ಅವರನ್ನು ಮದ್ದೂರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಅಲ್ಲಿದ್ದವರನ್ನು ವಿಚಾರಿಸಿದಾಗ, ನಲ್ಲಿ ಮತ್ತು ಬ್ಯಾನರ್ ಬಗ್ಗೆ ಗಲಾಟೆಯಾಯಿತು ಎಂದು ತಿಳಿಸಿದರು. ಎರಡೂ ಗುಂಪಿನವರು ಕೈ ಕೈ ಮಿಲಾಯಿಸಿ ಯಾರೋ ನಂದೀಶ ಮತ್ತು ಮುತ್ತುರಾಜು ಅಲಿಯಾಸ್ ಕೋಟಿ ಮುತ್ತುಗೆ ಚುಚ್ಚಿದ್ದಾರೆ ಎಂದು ಮಾಹಿತಿ ತಿಳಿಯಿತು. ಕುಮಾರ ಎಂಬುವವನ ಕಡೆಯಿಂದ ಗಲಾಟೆಯಾಯಿತು ಎಂದು ತಿಳಿಯಿತು. ಮುತ್ತುರಾಜು ಮತ್ತು ಇನ್ನೊಬ್ಬರಿಗೆ ಕೂಡ ಗಾಯವಾಗಿ ಅವರೂ ಕೂಡ ಆಸ್ಪತ್ರೆಗೆ ಹೋಗಿದ್ದಾರೆಂದು ತಿಳಿಯಿತು. ಆಗ ನಾನು ಅಲ್ಲಿದ್ದವರಿಗೆ ಇನ್ಸ್ ಪೆಕ್ಟರ್ ಬರುವವರೆಗೆ ಯಾರೂ ಗಲಾಟೆ ಮಾಡಬಾರದು ಎಂದು ಹೇಳಿ ಅಲ್ಲಿದ್ದವರನ್ನು ಸಮಾಧನಾಪಡಿಸಿದೆ. ಬಳಿಕ ಮದ್ದೂರು ವೃತ್ತ ನಿರೀಕ್ಷಕರಿಗೆ ಮತ್ತು ಪಿ ಎಸ್ ಐ ರವರಿಗೆ ಮಾಹಿತಿ ನೀಡಿದೆ. ನಾನು ಸದರಿ ಕೃತ್ಯ ಸ್ಥಳಕ್ಕೆ ಹೋದ ಬಗ್ಗೆ ಅಲ್ಲಿ ಘಟನೆಯನ್ನು ನೋಡಿದ ಬಗ್ಗೆ ನಾನು ಕಂಡಿದ್ದನ್ನು ತನಿಖಾಧಿಕಾರಿಯವರ ಬಳಿ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಕೃತ್ಯ ಸ್ಥಳಕ್ಕೆ ಹೋದ ಸಮಯದ ಬಗ್ಗೆ ವ್ಯತೀರಿಕ್ತವಾಗಿ ನುಡಿದ ಕಾರಣ ಆ ಬಗ್ಗೆ ಮಾತ್ರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ನುಡಿದ ಹೇಳಿಕೆಯಲ್ಲಿ ಕೃತ್ಯ ಸ್ಥಳಕ್ಕೆ ಹೋದ ಸಮಯದ ಬಗ್ಗೆ ಮತ್ತು ಸಾಕ್ಷಿ ತನಿಖಾಧಿಕಾರಿ ಮುಂದೆ ನೀಡಿದ ಕಲಂ 161 ದಂಡ ಪ್ರಕ್ರಿಯಾ ಸಂಹಿತೆ ಹೇಳಿಕೆಯಲ್ಲಿ ವ್ಯತ್ಯಾಸ ಇರುವುದರಿಂದ ಭಾಗಾಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

3. ನಾನು ಈ ಪ್ರಕರಣದಲ್ಲಿ ದಿನಾಂಕ 08.11.2017 ರಂದು ಡಿ ವೈ ಎಸ್ ಪಿ ರವರ ಮುಂದೆ ಹೇಳಿಕೆ ನೀಡಿ ಆ ದಿನ ಸಂಜೆ ಸುಮಾರು 7.00 ಗಂಟೆಯ ಸಮಯದಲ್ಲಿ ಠಾಣಾ

ಸರಹದ್ದಿನಲ್ಲಿ ರೌಂಡ್ಸ್ ಮಾಡಿಕೊಂಡಿದ್ದಾಗ ಡಿ.ಹೊಸೂರು ವಾಸಿಯಾದ ರವೀಂದ್ರ ನನಗೆ ಫೋನು ಮಾಡಿ ಗಲಾಟೆಯ ವಿಚಾರ ಹೇಳಿದ್ದಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿಗಳ ಪರ ವಕೀಲರು ಗೈರು ಹಾಜರು ಇರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.